

ಶಿಲ್ಪಾ ಕಬ್ಬಿಣಕಂತಿ

ಇಳಿದಾಗ... ಶಿಕ್ಷಕರು ತಮ್ಮ ತರಗತಿಗಳನ್ನು, ಮೌಲ್ಯಮಾಪನವನ್ನು ಬಹಿಷ್ಕರಿಸಿದಾಗ.. ಬ್ಯಾಂಕ್ ನೌಕರರು ಧರಣಿ ಹೂಡಿದಾಗ.. ವೈದ್ಯರು ತಮ್ಮ ಸೇವೆಯನ್ನು ಸ್ಥಗಿತಗೊಳಿಸಿದಾಗ... ಪೌರಕಾರ್ಮಿಕರು ತಮ್ಮ ಕೆಲಸಕ್ಕೆ ಬಾರದೇ ಹೋದಾಗ.. ಹೀಗೆ ಇನ್ನು ಮುಂತಾದ ಸಂದರ್ಭಗಳಲ್ಲಿ ಇಡೀ ಸಮುದಾಯದ ಜನಜೀವನವೇ ಅಸ್ಥವ್ಯಸ್ಥವಾಗುವುದು. ಪ್ರತಿಯೊಬ್ಬರೂ ಒಂದಲ್ಲ ಒಂದು ಬಗೆಯಲ್ಲಿ ತೊಂದರೆಯನ್ನು ಅನುಭವಿಸುವುದಂತೂ ನಿಜ. ಅಷ್ಟೇ ಅಲ್ಲ, ಒಂದು ದಿನ ಮನೆಗೆಲಸದ ಸಹಾಯಕಿ ಬರದೇ ಹೋದರೆ ನಾವು ಎಷ್ಟೊಂದು ಪಜೀತಿ ಪಡುವಂತಾಗುತ್ತದೆ. ನಮ್ಮ ಹೊಸ ಕಟ್ಟಡವೊಂದರ ಗೃಹ ಪ್ರವೇಶದ ದಿನಾಂಕವನ್ನು ನಿರ್ಧರಿಸಲು ನಮ್ಮ ಗುತ್ತಿಗೆದಾರ ಹಾಗೂ ಆತನ ಸಂಗಡಿಗರು ಮೊದಲು ಮನಸ್ಸು ಮಾಡಬೇಕು. ಸೂಚಿಸಿದ ಅವಧಿಯೊಳಗೆ ನಾವು ನಿಗದಿ ಪಡಿಸಿದ ಕೆಲಸವನ್ನು ಅವರು ಮಾಡದಿದ್ದರೆ ನಮ್ಮ ಮನೆ ಕಟ್ಟುವಿಕೆ ಪೂರ್ಣಗೊಳ್ಳುವುದಾದರೂ ಹೇಗೆ ..?

ಅಂತೆಯೇ ದಿನನಿತ್ಯದ ಬದುಕಿನಲ್ಲಿ ಕೊಳಾಯಿಗಾರರು (ಪ್ಲಂಬರ್), ವಿದ್ಯುತ್ಚಾಲಿತರು (ಎಲೆಕ್ಟ್ರೀಶಿಯನ್), ಮರಗೆಲಸದವರು, ವಾಹನ ದುರಸ್ಥಿಗಾರರು (ಮೆಕ್ಯಾನಿಕ್) ಮುಂತಾದವರ ಪಾತ್ರವೂ ಮುಖ್ಯವೇ. ಈ ಕೆಲಸಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಎದುರಿಸಿದಾಗಲೇ ನಮಗೆ ಅವರ ಪ್ರಾಮುಖ್ಯತೆಯ ಅರಿವಾಗುವುದು. ಅಂದ ಮೇಲೆ ಸ್ವಸ್ಥ ಹಾಗೂ ಸುಂದರ ಸಮಾಜದ ನಿರ್ಮಾಣದಲ್ಲಿ ಪ್ರತಿಯೊಂದು ಉದ್ಯೋಗವೂ ಮುಖ್ಯ. ಎಲ್ಲ ವರ್ಗದವರೂ ನಿಷ್ಟೆಯಿಂದ ಸಮರ್ಪಕವಾಗಿ ಕಾರ್ಯನಿರ್ವಹಿಸಿದರೆ ಮಾತ್ರವೇ ಆರೋಗ್ಯಕರ ಸಮಾಜ ಸಾಧ್ಯ. ಆದ್ದರಿಂದ ಇಂದು ನಾವು ಎಲ್ಲ ವೃತ್ತಿಗಳನ್ನೂ ಗೌರವಿಸುವುದನ್ನು ಕಲಿಯಬೇಕಾಗಿದೆ.

ನಮ್ಮ ಮಕ್ಕಳನ್ನು ನೀವು ದೊಡ್ಡವರಾದ ಮೇಲೆ ಏನಾಗ್ತೀರ ಎಂದು ಕೇಳಿದಾಗ ಹತ್ತಾರು ರೀತಿಯ ಉತ್ತರಗಳು ಬರುತ್ತವೆ. 'ನಾನು ಟೀಚರ್ ಆಗ್ತೀನಿ.. ನಾನು ಡ್ರೈವರ್ ಆಗ್ತೀನಿ..ನಾನು ಡಾಕ್ಟರ್ ಆಗ್ತೀನಿ.. ನಾನು ವಿಜ್ಞಾನಿ ಆಗ್ತೀನಿ..' ಹೀಗೆ.. ಪಟ್ಟಿ ಮುಂದುವರೆಯುತ್ತದೆ. ಆದರೆ, ಅವರ ಈ ಉತ್ತರಗಳಿಗೆ ಸರಿಯಾದ ಪ್ರತಿಕ್ರಿಯೆ ಹಾಗೂ ಸ್ಪಂದನ ನೀಡುವುದು ದೊಡ್ಡವರಾದ ನಮ್ಮ ಜವಾಬ್ದಾರಿ. ಅವರ ಆಯ್ಕೆಯ ವೃತ್ತಿಯ ಬಗ್ಗೆ ಅವಹೇಳನ ಮಾಡುವುದಾಗಲಿ ಅಥವಾ ಅದು ಸಾಮಾನ್ಯ ಎಂದು ಹೇಳುವುದಾಲಿ ಮಾಡಬಾರದು. ಆ ವೃತ್ತಿಯ ಸಾಧಕ ಭಾಧಕಗಳನ್ನು ಎಳಯರಿಗೆ ತಿಳಿಸಿ ಹೇಳಬೇಕು. ಆ ಉದ್ಯೋಗದಿಂದ ಅವರು ಹೇಗೆ ಕುಟುಂಬಕ್ಕೆ ನೆರವಾಗಬಹುದು ಹಾಗೂ ಸಮಾಜಕ್ಕೆ ಕೊಡುಗೆ ನೀಡಬಹುದು ಎಂಬುದನ್ನು ವಿವರವಾಗಿ ತಿಳಿಸಿ ಹೇಳಬೇಕು. ಶ್ರದ್ಧಾ ಭಕ್ತಿಯಿದ ಮಾಡಿದಾಗ ಎಲ್ಲಾ ವೃತ್ತಿಗಳೂ ಗೌರವವನ್ನು ತಂದುಕೊಡುವಂತವು ಎಂಬುದನ್ನು ಅವರಿಗೆ ಮನವರಿಕೆ ಮಾಡಿಕೊಡಬೇಕು. ಮುಖ್ಯವಾಗಿ ನಮ್ಮ ಮಕ್ಕಳಿಗೆ ಎಲ್ಲಾ ವೃತ್ತಿಗಳನ್ನು ಸಮಾನವಾಗಿ ಗೌರವಿಸುವುದನ್ನು ತಿಳಿಸಿ ಹೇಳಬೇಕಾಗಿದೆ. ಕೊನೆಯದಾಗಿ, ನ್ಯಾಯಯುತವಾಗಿ ಬದುಕಲು ವೃತ್ತಿ ಯಾವುದಾದರೇನು..? ಮೌಲ್ಯಯುತ ಜೀವನ ನಮ್ಮದಾಗಬೇಕಷ್ಟೆ.